ಕೆಟ್ಟು ಹೋಗುವದಿಲ್ಲವೇ? ಸಮಾಜಕ್ಕೆ ಮತ್ತು ರೈತರಿಗೆ ಎಲ್ಲರಿಗೂ ಹಾನಿಯಾಗುವದಿಲ್ಲವೇ? ಭತ್ತದ ಬೆಳೆಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಡುತ್ತೀರೋ ಅಷ್ಟೇ ಪ್ರಾಮುಖ್ಯತೆಯನ್ನು ಕಬ್ಬಿನ ಬೆಳೆಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ.— ಕೊಡುವುದಕ್ಕೆ ಆಗುವದಿಲ್ಲ ಎಂದು ಹೇಳುವುದಿಲ್ಲ, ಕಬ್ಬಿಗೂ ಕೊಡುತ್ತೇವೆ, ಹುಲ್ಲಿಗೂ ಕೊಡುತ್ತೇವೆ. ಆದರೆ ಗೊಬ್ಬರದ ಅಭಾವ ಇರುವದರಿಂದ ಯಾವುದಕ್ಕೆ ಆದ್ಯತೆ ಕೊಡಬೇಕು ಎಂದರೆ, ಜನತೆಯ ಹೊಟ್ಟೆ ಕೂಳಿಗೆ ಮುಖ್ಯವಾದ ಬೆಳೆಗೆ ಆದ್ಯತೆ ಕೊಡಬೇಕು. ಮಂಡ್ಯ ಜಿಲ್ಲೆಯಲ್ಲಿ ಇಡೀ ರಾಜ್ಯಕ್ಕೆ ಬೇಕಾಗುವ ಗೊಬ್ಬರವನ್ನು ಕೊಟ್ಟರೂ ಸಾಲುವದಿಲ್ಲ. ಪರಿಸ್ಥಿತಿ ಈ ರೀತಿ ಇರುವಾಗ ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಹೆಚ್ಚು ಇದೆ, ಫ್ಯಾಕ್ಟರಿ ಜಾಸ್ತಿ ಇದೆ. ಅವರೇ ಒಂದು ಕಾರ್ಖಾನೆಯನ್ನು ತಾವೇ ಹಾಕಿಕೊಂಡರೆ ಸರ್ಕಾರ ಪ್ರಯತ್ನ ಮಾಡಿ ಅವರಿಗೆ ಸಹಾಯ ಮಾಡುತ್ತದೆಂದು ಹೇಳುತ್ತೇನೆ.

ಶ್ರೀ ಡಿ. ಹುಲಗೇಗೌಡ.— ರಬಿ ಬೆಳೆಗೆ ೮ ಸಾವಿರ ಟನ್ ಸಸಾರಜನಕವನ್ನು ಮಂಡ್ಯ ಜಿಲ್ಲೆಗೆ ಕೊಡುವ ಯೋಚನೆ ಮಾಡುವ ಕಾರ್ಯಕ್ರಮ ಇದೆ ಎಂದು ಹೇಳಿದ್ದೀರಿ ಮೇಲೆ ಹೇಳಿದ ಬೆಳೆಗೆ ಅಷ್ಟು ಕೊಟ್ಟರೆ ೧/೫ ಭಾಗ ಬೆಳೆಗೂ ಸಾಲುವುದಿಲ್ಲ. ಹೆಚ್ಚು ಬೆಳೆ ನಿರಿಕ್ಷಿಸುತ್ತಿದ್ದೀರಿ. ಆಹಾರ ಬೆಳೆ ಸೀಗುತ್ತದೆ ಎನ್ನುವ ದೃಷ್ಟಿಯಿಂದ, ಅದರ ಕಡೆಗೆ ಗಮನ ಕೊಡುತ್ತೀರಾ?

ಶ್ರೀ ಕೆ. ಎಚ್ ಪಾಟೀಲ.— ಪರರಾಷ್ಟ್ರದಿಂದ ಗೊಬ್ಬರ ತರಬೇಕಾಗಿರುವದರಿಂದ, ಸಾಕಾಗುವಷ್ಟು ಗೊಬ್ಬರ ಸಿಕ್ಕದೇ ಇರುವದರಿಂದ, ಸಾಧ್ಯವಾದಷ್ಟು ರೈತರು ಹೊಲದ ದಂಡೆಗಳಲ್ಲಿ ಹಸಿರು ಗೊಬ್ಬರದ ಗಿಡಗಳನ್ನು ಹಚ್ಚಿ ತಮಗೆ ಬೇಕಾಗುವ ಸೈಟ್ರೋಜನ್ ಗೊಬ್ಬರ ಮಾಡುವ ಕಾಲ ಬಂದಿದೆ. ಮಂಡ್ಯದ ಜನ ಬುದ್ಧಿವಂತಿಕೆ ಜನ. ಈ ರೀತಿ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(iii) Re: Deputation of a Social Worker to the Pestalozzi childrens village, Trogen, Switzerland.

Sri T. R. SHAMANNA (Fort) — I call the attention of the Minister for Community Devlopment and Social Welfare to the deputation of a Social Worker to the Pestalozzi Children's village, Trogen, Switzerland.

Sri M. MALLIKARJUNSWAMY (Ministr for Community Development and Socicl Welfore)– Sir I make the following Statement:

As per the Agreement arrived at between the Government of India and Pestalozzi Children's village Foundation, Switzerland, 20 Orphan Children in the age group of 10 to 12 years, a married couple to serve as House Parents, and

a Helper were sent in the year 1970 to Switzerland for the education and training of the Children under the Foundation. A letter dated 8-7-1973 was received by the Chief Inspector of Certified Schools from the Foundation that the House Parents were being repatriated and that a new couple might be sent in their place urgently by the first week of September 1973; as otherwise the children would be without any guidance or assistance in the absence of House parents. In his subsequent letter, the Director, Pestalozzi Children's Village, Trogen, requested the Chief Inspector of Certified Schools to contact Father Volken, a representative of the Pestalozzi Children's Village Foundation, in selecting House Parents in place of those repatriated.

2. The cases of the Department Officers,whose husband or wife, as the case may be, were also graduates, were considered. It was found that some couples were not eligible for consideration and some, in the meanwhile, expressed their un-willingness orally. Meanwhile, applications in the prescribed proforma were received from two couples and a pair stated to be engaged. One of the spouses of the said couples; and one member of the said pair belongs to the Department.

3. These applications were placed for consideration before a Committee consisting of the following:—

1) Father, Volken, a representative of the Pestalozzi Foundation.

2) The Chief Inspector of Certified Schools.

3) The Senior Inspector of the Certified Schools.

The Committee has recommended two couples in order of preference and the recommendations have been sent by the Chief Inspector of Certified Schools for the approval of Government.

4) These recommendations have been examined by the Government and further action will be taken in consultation with the Government of India and Pestalozzi Foundation who have to approve the selection.

ಶ್ರೀ ಟಿ. ಆರ್. ಶಾಮಣ್ಣ.—ತಾವು ಕೊಟ್ಟಿರತಕ್ಕ ಹೇಳಿಕೆಯನ್ನು ನಾನು ಒಪ್ಪುತ್ತೇನೆ. ತಾವು ಅರ್ಹತೆ ಇರತಕ್ಕವರನ್ನು ಕಳಿಸಿದ್ದೀರಿ. ಆದರೆ ಅರ್ಹತೆ ಇದ್ದವರಿಗೆ ಬಿಟ್ಟಿದ್ದೀರಿ ಎನ್ನತಕ್ಕ ಆರೋಪ ಇಲ್ಲ ಎನ್ನತಕ್ಕ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬಹುಶಃ ನಾವು ಸೆಲೆಕ್ಟ್ ಮಾಡಿರತಕ್ಕ ಕಪಲ್ಸ್ ಏನು ಇದ್ದಾರೋ ಅವರೆಲ್ಲ ಅರ್ಹತೆ ಇರತಕ್ಕವರು. ಅದರಲ್ಲಿ ಮೂರನೆಯವರು ಇನ್ನೂ ಮದುವೆ ಆಗುತ್ತಾ ಇದ್ದೀವೆ ಎಂದು ಹೇಳಿದರು. ಗಂಡಹೆಂಡಿರು ಹೋಗಬೇಕು. ಎನ್‌ಕ್ವೈರಿ ನಡೆಯುತ್ತಾ ಇದೆ. ಮಿಸಸ್ ಸಿಂಗ್ ಥಕೂರ್ ೪೫ ವರ್ಷ ಇರಬೇಕಾದ್ದು, ಅವರಿಗೆ ೪೬ ವರ್ಷ ಆಗಿದೆ. ಆರು ಕಂಡಿಷನ್ಸ್ ಇವೆ. ಅವನ್ನು ಫುಲ್ ಫಿಲ್ ಮಾಡತಕ್ಕವರು ಇರಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಅದರಲ್ಲೇ ರಾಜಕೀಯ ನಡೆದಿದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಾನು ಎಲ್ಲಿಯ ವರೆಗೆ ಈ ಇಲಾಖೆಯಲ್ಲಿ ಮಂತ್ರಿಯಾಗಿರುತ್ತೇನೋ ಅಲ್ಲಿಯ ವರೆಗೆ ಈ ಇಲಾಖೆಯಲ್ಲಿ ರಾಜಕೀಯಕ್ಕೆ ಅವಕಾಶ ಇರುವದಿಲ್ಲ.

Sri KAGODU THIMMAPPA.–I will bring it in another form.

Sri M. MALLIKARJUNA SWAMY.—Please bring it in another form. I am here to reply. ನಾವು ಸೆಲೆಕ್ಷನ್ ಏನು ಮಾಡಿದ್ದೇವೆ ಅದು ಸರಿಯಾದಂಥ ರೀತಿಯಲ್ಲಿ ನಡೆದಿದೆ. ಸ್ವಿಟ್ಸರ್‌ಲೆಂಡಿನ ಒಬ್ಬರು, ಫಾದರ್ ಓಕನ್ ಅವರೂ ಕೂಡ ಕಮಿಟಿಯಲ್ಲಿ ಸೆಲೆಕ್ಟ್ ಮಾಡುವಾಗ ಇದ್ದರು. ಇಷ್ಟು ಮಾತ್ರ ಶಾಮಣ್ಣನವರಿಗೆ ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಯಾರನ್ನು ಸೆಲೆಕ್ಟ್ ಮಾಡಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪೇನಲಿನಲ್ಲಿ ಇರತಕ್ಕ ಎರಡನೆಯವರನ್ನು ಸೆಲೆಕ್ಟ ಮಾಡಿದ್ದೇವೆ.

(iv) Re : Incident relating to the Kidnapping of Two girls at Gulbarga.

Sri BAPU GOWDA RAYAPPA (Shahapur).— I call the attention of the Chief Minister to the incident relating to the kidnapping of two girls at Gulbarga;

Sri K. H. PATIL (Minister for Agriculture and Forests) [On behalf of the Chief Minister] I make the following statement:—